**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು-01**

ಸಂಖ್ಯೆ:ಎಡಿಎಂ2(4)ಶಾ .ಪ್ರಾಂ.1/2026-27/1786476 ದಿನಾಂಕ: 25/05/2026

**ಸುತ್ತೋಲೆ**

| | |
|---|---|
| ವಿಷಯ | ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ 2026-27ನೇ ಸಾಲಿನಲ್ಲಿ ಶಾಲಾ ಪ್ರಾರಂಭೋತ್ಸವ ಮತ್ತು ದಾಖಲಾತಿ ಆಂದೋಲನ, ಸೇತುಬಂಧ ಹಾಗೂ ಮಿಂಚಿನ ಸಂಚಾರ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ. |
| ಉಲ್ಲೇಖ | ಈ ಕಛೇರಿಯ ಸುತ್ತೋಲೆ ಸಂಖ್ಯೆ : ಎಡಿಎಂ-2/ವಾ.ಕ್ರಿ.ಯೋ/ಅನುಷ್ಠಾನ/01/2025-26 ದಿನಾಂಕ: 09.04.2026 |

********

ವಿಷಯಕ್ಕೆ ಸಂಬಂಧಿಸಿದಂತೆ 2026-27ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅನುವಾಗುವಂತೆ, ಈ ಹಿಂದಿನ ಸಾಲುಗಳಂತೆ ದಿನಾಂಕ: 29.05.2026ರಂದು ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಶಾಲೆಗಳಿಗೆ ಹಾಜರಾಗಿ ಅಗತ್ಯ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದು. ವಿದ್ಯಾರ್ಥಿಗಳ ಶಾಲಾ ಪ್ರವೇಶಾತಿಯನ್ನು / ದಾಖಲಾತಿಯನ್ನು ದಿನಾಂಕ: 01.06.2026 ರಿಂದ ಶಾಲಾ ಪ್ರಾರಂಭೋತ್ಸವದೊಂದಿಗೆ ಆರಂಭಿಸಿ, ದಿನಾಂಕ: 30.06.2026ರಂದು ಮುಕ್ತಾಯಗೊಳಿಸಲು ಅಗತ್ಯ ಕ್ರಮಗಳನ್ನು ವಹಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಉಲ್ಲೇಖಿತ ಸುತ್ತೋಲೆಯ ಮೂಲಕ ಈಗಾಗಲೇ ತಿಳಿಸಲಾಗಿರುವ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳಿಗೆ, ಶೈಕ್ಷಣಿಕ ಉಸ್ತುವಾರಿ ಅಧಿಕಾರಿಗಳಿಗೆ, ಹಾಜರಾತಿ ಅಧಿಕಾರಿಗಳಿಗೆ ಹಾಗೂ ಶಾಲಾ ಮುಖ್ಯಸ್ಥರಿಗೆ ಸೂಚಿಸಿದೆ

ಮುಂದುವರೆದು, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ 2026-27 ನೇ ಸಾಲಿನಲ್ಲಿ ಶಾಲಾ ಪ್ರಾರಂಭೋತ್ಸವ ಮತ್ತು ದಾಖಲಾತಿ ಆಂದೋಲನ, ಸೇತುಬಂಧ ಹಾಗೂ ಮಿಂಚಿನ ಸಂಚಾರ ಕಾರ್ಯಕ್ರಮಗಳನ್ನು ಮೇಲ್ಕಂಡಂತೆ ಸಕಾಲದಲ್ಲಿ ಯಶಸ್ವಿಯಾಗಿ ಕೈಗೊಳ್ಳುವ ನಿಟ್ಟಿನಲ್ಲಿ ಸದರಿ ಅಧಿಕಾರಿಗಳು, ಆಯಾ ಶಾಲಾ ಮುಖ್ಯಸ್ಥರು, ಶಿಕ್ಷಕರು ಮತ್ತು ಸಿಬ್ಬಂದಿಗಳು ಅಗತ್ಯ ಪೂರ್ವ ಸಿದ್ಧತೆಗಳೊಂದಿಗೆ ಕೆಳಕಂಡ ವಿಸ್ತೃತವಾದ ಕ್ರಮಗಳನ್ನು ಚಾಚೂ ತಪ್ಪದೇ ಹಮ್ಮಿಕೊಳ್ಳುವಂತೆ ತಿಳಿಸಲಾಗಿದೆ

1. **ಶಾಲಾ ಪ್ರಾರಂಭೋತ್ಸವದ ಪೂರ್ವ ಸಿದ್ಧತೆ ಮತ್ತು ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ**

**ಅ) ಶಾಲಾ ಪ್ರಾರಂಭೋತ್ಸವದ ಪೂರ್ವ ಸಿದ್ಧತೆ**

i. ಸಂಪೂರ್ಣ ಶಾಲೆಯ ಸ್ವಚ್ಛತೆ ಕಾರ್ಯವನ್ನು ಕೈಗೊಂಡು ದಿನಾಂಕ: 28.05.2026ರೊಳಗೆ ಪೂರ್ಣಗೊಳಿಸಿಕೊಳ್ಳುವುದು & ಶಾಲೆಯಲ್ಲಿ ಶುದ್ಧ ಕುಡಿಯುವ ನೀರು ಸೇರಿದಂತೆ ಎಲ್ಲಾ ಸೌಲಭ್ಯಗಳು ಸುಸ್ಥಿತಿಯಲ್ಲಿ ಲಭ್ಯವಿರುವ, ಸುರಕ್ಷಿತವಾಗಿರುವ ಮತ್ತು ಗುಣಮಟ್ಟದಿಂದ ಕೂಡಿರುವ ಕುರಿತು ಪರಿಶೀಲಿಸಿ, ಅಗತ್ಯಾನುಸಾರ ಸರಿಪಡಿಸಿಕೊಳ್ಳತಕ್ಕದ್ದು.

ii. ರಾಜ್ಯದಲ್ಲಿ ಇತ್ತೀಚಿಗೆ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕೆಲವು ಶಾಲಾ ಕಟ್ಟಡಗಳು, ಶೌಚಾಲಯಗಳು, ಅಡುಗೆ ಕೋಣೆಗಳು ಮತ್ತು ಆವರಣಗಳು ನೀರಿನಿಂದ ಆವೃತವಾಗಿರಬಹುದು ಅಥವಾ ಭಾಗಶ: / ಪೂರ್ಣ ಪ್ರಮಾಣದಲ್ಲಿ ಶಿಥಿಲವಾಗಿರಬಹುದು ಅಥವಾ ನೆಲದ ಮೇಲೆ ಬಿದ್ದಿರುವ ಮರಗಳಿಂದ, ರಂಬೆಕೊಂಬೆಗಳಿಂದ / ವಿದ್ಯುತ್ ತಂತಿಗಳಿಂದ / ಸಂಪರ್ಕಗಳಿಂದ ಇನ್ನು ಮುಂತಾದವುಗಳಿಂದ ಸದರಿ ಸ್ಥಳಗಳಲ್ಲಿ ಅಪಾಯಕಾರಿ ಸನ್ನಿವೇಶಗಳು ಉದ್ಭವಿಸಿರಬಹುದು ಪ್ರಯುಕ್ತ ದಿನಾಂಕ: 29/05/2025ರಂದು ಶಾಲೆಯ ಕಟ್ಟಡಗಳು, ಶೌಚಾಲಯಗಳು, ಅಡುಗೆ ಕೋಣೆಗಳು, ಜಾಗ / ಆವರಣ ಹಾಗೂ ಅಕ್ಕಪಕ್ಕದ ಜಾಗಗಳನ್ನು ಪರಿಶೀಲಿಸಿ ಇಂತಹ ಅಪಾಯಕಾರಿ ಸನ್ನಿವೇಶಗಳು ಕಂಡುಬಂದಲ್ಲಿ ಅವುಗಳನ್ನು ಸಂಬಂಧಿಸಿದ ಇಲಾಖೆಗಳ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ತೆರವುಗೊಳಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ, ಸಾರ್ವಜನಿಕರಿಗೆ ಮತ್ತು ಜಾನುವಾರುಗಳಿಗೆ ಯಾವುದೇ ತೊಂದರೆಯಾಗದಂತೆ ಎಂದಿನಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವಂತೆ ಸಂಬಂಧಿಸಿದ ಇಲಾಖಾಧಿಕಾರಿಗಳಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ಈ ಸಂದರ್ಭದಲ್ಲಿ ತಿಳಿಸಿದೆ.

iii. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿ ಇರುವುದನ್ನು ಹಾಗೂ ಶಾಲೆ ಸಂಪೂರ್ಣವಾಗಿ ಸ್ವಚ್ಛವಾಗಿರುವುದನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳತಕ್ಕದ್ದು ಒಂದು ವೇಳೆ ಚಿಕ್ಕ ಪುಟ್ಟ ದುರಸ್ತಿಗಳನ್ನು ಮತ್ತು ಕಾಮಗಾರಿಗಳನ್ನು ಕೈಗೊಳ್ಳುವ ಅಗತ್ಯವಿದ್ದಲ್ಲಿ ಅದನ್ನು ಲಭ್ಯವಿರುವ ಅನುದಾನವನ್ನು ವ್ಯಯಿಸಿ ಅಥವಾ ಜಿಲ್ಲಾಡಳಿತದ

ಸಹಕಾರದೊಂದಿಗೆ ಅಥವಾ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಅಥವಾ ನಮ್ಮ ಶಾಲೆ ನಮ್ಮ ಜವಾಬ್ದಾರಿ ಅಡಿಯಲ್ಲಿ ದಿನಾಂಕ: 28.05.2026 ರೊಳಗೆ ಪೂರ್ಣಗೊಳಿಸಿಕೊಂಡು, ಸರ್ಕಾರಿ ಶಾಲೆಗಳನ್ನು ಸುಸಜ್ಜಿತವಾಗಿ ಮತ್ತು ಆಕರ್ಷಕವಾಗಿ ಇರಿಸಿಕೊಳ್ಳತಕ್ಕದ್ದು ಈ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳತಕ್ಕದ್ದು.

iv. ಎಸ್.ಡಿ.ಎಂ.ಸಿ ಸಭೆ ನಡೆಸಿ ಶಾಲಾ ಪ್ರಾರಂಭೋತ್ಸವದ ಬಗ್ಗೆ ಚರ್ಚೆ ಮಾಡುವುದು.

v. ಈಗಾಗಲೇ ಸಿದ್ಧಪಡಿಸಿಕೊಂಡಿರುವ ದಾಖಲೆಗಳ ಜೊತೆಯಲ್ಲಿ ಕೆಳಗೆ ನಮೂದಿಸಿರುವ ಶಾಲಾ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳುವುದು.

- ಶಾಲಾ ವೇಳಾ ಪಟ್ಟಿ
- ವಿಷಯವಾರು ವಾರ್ಷಿಕ ಕ್ರಿಯಾ ಯೋಜನೆ.
- ಶಿಕ್ಷಕರ ವೇಳಾಪಟ್ಟಿ (ತರಗತಿವಾರು & ಶಿಕ್ಷಕರವಾರು).
- ಶಾಲಾಭಿವೃದ್ಧಿ ಯೋಜನೆ.
- ಶಾಲಾ ಪಂಚಾಂಗ (ಶಾಲಾ ವಾರ್ಷಿಕ ಕ್ಯಾಲೆಂಡರ್).
- ಕಡ್ಡಾಯವಾಗಿ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಸಭೆ ನಡೆಸಿ ಚರ್ಚಿಸಿ ಶಾಲಾ ಪ್ರಾರಂಭೋತ್ಸವಕ್ಕೆ ಪೂರ್ವ ತಯಾರಿ ಮಾಡಿಕೊಳ್ಳುವುದು.
- ಮುಖ್ಯ ಶಿಕ್ಷಕರು ತರಗತಿಯ ಶಿಕ್ಷಕರನ್ನು ನೇಮಿಸುವುದು.

**ಆ) ಮುಖ್ಯ ಶಿಕ್ಷಕರು ಸಹ ಶಿಕ್ಷಕರಿಗೆ ವಿವಿಧ ಪ್ರಭಾರಗಳ ಹಂಚಿಕೆ / ನಿರ್ವಹಣೆ, ತರಗತಿಯ ಶಿಕ್ಷಕರನ್ನು ನೇಮಿಸುವುದು**

i. ಪ್ರಸ್ತುತ ವರ್ಷದಲ್ಲಿ ಹಿಂದಿನ ತರಗತಿಗಳಿಂದ ಉತ್ತೀರ್ಣರಾಗಿರುವ ಮಕ್ಕಳ ಹಾಜರಾತಿ ವಹಿಗಳನ್ನು (Students Attendance Register) ಸಿದ್ಧಪಡಿಸುವುದು.
ii. ಶಿಕ್ಷಕ / ಶಿಕ್ಷಕಿಯರು ತಮ್ಮ ಶೈಕ್ಷಣಿಕ ದಾಖಲೆಗಳಾದ ವಿಷಯವಾರು ವಾರ್ಷಿಕ ಕ್ರಿಯಾ ಯೋಜನೆ, ಪಾಠ ಯೋಜನೆ, ಮುಂತಾದವುಗಳಿಗೆ ಮುಖ್ಯ ಶಿಕ್ಷಕರಿಂದ ಅನುಮೋದನೆ ಪಡೆದುಕೊಳ್ಳುವುದು.
iii. ಮುಖ್ಯಶಿಕ್ಷಕರು ಸಹಶಿಕ್ಷಕರೊಡಗೂಡಿ ಸಮುದಾಯದ ಸಹಭಾಗಿತ್ವದೊಂದಿಗೆ ಶಾಲಾ ಪ್ರಾರಂಭೋತ್ಸವಕ್ಕೆ ಸಂಪೂರ್ಣ ಸಿದ್ಧತೆ ಮಾಡಿಕೊಳ್ಳುವುದು.
iv. ಸಮುದಾಯದೊಂದಿಗೆ ಸೇರಿ ಜಾಥಾ ಮಾಡಿ ಶಾಲಾ ಪ್ರಾರಂಭೋತ್ಸವದ ದಿನವೇ ಅಂದರೆ ದಿನಾಂಕ : 01.06.2026 ರಂದೇ ಮಕ್ಕಳು ಶಾಲೆಗೆ ಬರಲು ಅರಿವು ಮೂಡಿಸುವುದರ ಜೊತೆಗೆ ಪೋಷಕರನ್ನು ಹಾಗೂ ಸ್ಥಳೀಯ ಜನಪ್ರತಿನಿಧಿಗಳನ್ನು ಶಾಲಾ ಪ್ರಾರಂಭೋತ್ಸವಕ್ಕೆ ಆಹ್ವಾನಿಸುವುದರೊಂದಿಗೆ ಶಾಲಾ ಹಬ್ಬವನ್ನು ಆಚರಿಸುವುದು

**2. 2024-25 ಮತ್ತು 2025-26ನೇ ಸಾಲಿನಲ್ಲಿ ಒಟ್ಟು 66 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಹಾಗೂ 91 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯವರೆಗೆ ಉನ್ನತೀಕರಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಲಾಗಿದ್ದು ಹಾಗೂ 2025-26ನೇ ಸಾಲಿನಲ್ಲಿ 180 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲಾಗಿದ್ದು ಈ ಬಗ್ಗೆ ಅಗತ್ಯ ಕ್ರಮಕೈಗೊಳ್ಳುವುದು.**

**3. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಖಾಯಂ ಶಿಕ್ಷಕರು, ಮುಖ್ಯ ಶಿಕ್ಷಕರು ಹಾಗೂ ಅಧಿಕಾರಿಗಳು KAAMS ಮುಖಾಂತರ ಹಾಜರಾತಿ ನಿರ್ವಹಣೆಯ ಬಗ್ಗೆ**

2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ-451 ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಪಿ 1 ಇಜಿಓವಿ 2026 ದಿನಾಂಕ 16.02.2026 ರನ್ವಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಖಾಯಂ ಶಿಕ್ಷಕರು ತತ್ಸಮಾನ ವೃಂದದ ಅಧಿಕಾರಿಗಳು ಮತ್ತು ಎಲ್ಲಾ ಕಛೇರಿಗಳಲ್ಲಿರುವ ಖಾಯಂ ಬೋಧಕೇತರ ಸಿಬ್ಬಂದಿ/ಅಧಿಕಾರಿಗಳ ಹಾಜರಾತಿಯನ್ನು ಗುರುತಿಸಲು / ಮೇಲ್ವಿಚಾರಣೆ ಮಾಡಲು ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಕರ್ತವ್ಯ-ಕೆ.ಎ.ಎ.ಎಂ.ಎಸ್-KAAMS) ಮೊಬೈಲ್ ಅಪ್ಲಿಕೇಷನ್ ಅನ್ನು ಬಳಸಿ ಹಾಜರಾತಿಯನ್ನು ಕಡ್ಡಾಯವಾಗಿ ನಿರ್ವಹಣೆ ಮಾಡುವುದು.

**4. ಶಾಲಾ ಪ್ರಾರಂಭೋತ್ಸವ**

i. ಶಾಲಾ ಪ್ರಾರಂಭೋತ್ಸವವನ್ನು ಒಂದು ಯಾಂತ್ರಿಕ ಪ್ರಕ್ರಿಯೆ ಎಂದು ಪರಿಗಣಿಸದೆ ಅತ್ಯಂತ ಉತ್ಸಾಹದಿಂದ ಮುಖ್ಯಶಿಕ್ಷಕರು. ಸಹಶಿಕ್ಷಕರು. ಎಸ್.ಡಿ.ಎಂ.ಸಿ ಹಾಗೂ ಪೋಷಕರು ಸೇರಿ ಶಾಲಾ ಮಕ್ಕಳನ್ನು, ಕಲಿಕಾ ಸಾಧಕರುಗಳನ್ನು ಸ್ವಾಗತಿಸುವ ರೀತಿಯಲ್ಲಿ ವಿಶೇಷವಾಗಿ ಸ್ವಾಗತಿಸುವುದು.
ii. ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಿ ಶಾಲಾ ವಾತಾವರಣವನ್ನು ಆಕರ್ಷಣೀಯವಾಗಿರಿಸುವುದು.
iii. ಸರ್ಕಾರಿ ಶಾಲೆಗಳ ಮುಂಭಾಗದಲ್ಲಿ ಸರ್ಕಾರಿ ಶಾಲೆಗಳಲ್ಲಿ ಲಭ್ಯವಿರುವ ಸವಲತ್ತುಗಳ ಬಗ್ಗೆ ಬ್ಯಾನರ್‌ಗಳನ್ನು ಅಳವಡಿಸುವುದು
iv. ಜಿಲ್ಲಾ ಉಸ್ತುವಾರಿ ಸಚಿವರುಗಳು/ಸಚಿವರುಗಳು ಹಾಗೂ ಶಾಸಕರು ಸದರಿ ದಿನದಂದು ತಮ್ಮ ವ್ಯಾಪ್ತಿಯ ಯಾವುದಾದರು ಒಂದು ಸರ್ಕಾರಿ ಶಾಲೆಗೆ ಭೇಟಿ ನೀಡಿ ಶಾಲೆ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನವನ್ನು

ನಡೆಸಿಕೊಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು/ಸಚಿವರು ಹಾಗೂ ಶಾಸಕರನ್ನು ಯಾವುದಾದರೂ ಒಂದು ಸರ್ಕಾರಿ ಶಾಲೆಗೆ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಶಿಕ್ಷಣ ಇಲಾಖೆ ಸೇರಿದಂತೆ ಬೇರೆ ಇಲಾಖೆಗಳಿಂದಲೂ ಒಬ್ಬ ಅಧಿಕಾರಿ ಸದರಿ ದಿನದಂದು ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಲು ಕ್ರಮವಹಿಸುವಂತೆ ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ಅಗತ್ಯ ಪೂರ್ವ ತಯಾರಿಗಳನ್ನು ಕೈಗೊಂಡು ಕಾರ್ಯಕ್ರಮದ ನಿರ್ವಹಣೆಗೆ ಸಹಕರಿಸಿ ಪ್ರಾರಂಭೋತ್ಸವವನ್ನು ಯಶಸ್ವಿಗೊಳಿಸಲು ಸೂಚಿಸಲಾಗಿದೆ.

v. ಮೊದಲ ಎರಡು ಅವಧಿಗಳಲ್ಲಿ ಮಕ್ಕಳನ್ನು ಆಹ್ವಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಮೂರನೆಯ ಅವಧಿಯಿಂದಲೇ ಹಾಜರಾಗಿರುವ ಮಕ್ಕಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸುವುದು. ಹಾಜರಾಗದಿರುವ ಮಕ್ಕಳನ್ನು ಶಾಲೆಗೆ ಕರೆತರುವಂತೆ ಹಾಜರಾಗಿರುವ ಮಕ್ಕಳನ್ನು ಪ್ರೇರೇಪಿಸುವುದು.

vi. ಮೊದಲನೆಯ ದಿನದಿಂದಲೇ ಪಾಠ / ಸೇತುಬಂಧ ಶಿಕ್ಷಣ ಆರಂಭಿಸುವುದು. ಈ ಮಾಹಿತಿ ಮಕ್ಕಳಿಗೆ ಮತ್ತು ಪೋಷಕರಿಗೆ ತಲುಪುವಂತೆ ಮಾಡುವುದು.

vii. ಅಕ್ಷರ ದಾಸೋಹದ ಕಾರ್ಯಕ್ರಮದಡಿ ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮವನ್ನು ಶುಚಿಯಾದ ಮತ್ತು ರುಚಿಯಾದ ಸಿಹಿಯೂಟದೊಂದಿಗೆ ಆಯೋಜಿಸುವುದು.

**ವಿ.ಸೂ:** ಎಲ್ಲಾ ಶಿಕ್ಷಕರು ಶಾಲಾ ಪ್ರಾರಂಭೋತ್ಸವದ ಕಾರ್ಯಕ್ರಮವನ್ನು ತಮ್ಮ ವಿಷಯಾವಾರು ಪಾಠಗಳ ಪರಿಚಯ/ ಸೇತುಬಂಧ ಶಿಕ್ಷಣ ಆರಂಭಿಸುವುದರೊಂದಿಗೆ ಅರ್ಥಪೂರ್ಣವಾಗಿ ಪ್ರಾರಂಭಿಸುವುದು

**5. ದಾಖಲಾತಿ ಆಂದೋಲನ**

ವಿವಿಧ ಕಾರಣಗಳಿಂದಾಗಿ ಕೆಲವು ಮಕ್ಕಳು ಶಾಲೆಯನ್ನು ಮಧ್ಯಭಾಗದಲ್ಲಿ ಬಿಡುವುದು ಹಾಗೂ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗದಿರುವುದರಿಂದ ದಾಖಲಾತಿ ಪ್ರಮಾಣವು ಕಡಿಮೆಯಾಗುವ ಸಂಭವವಿರುವುದರಿಂದ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಈ ಪ್ರಯುಕ್ತ ಪರಿಣಾಮಕಾರಿಯಾದ ದಾಖಲಾತಿ ಆಂದೋಲನವನ್ನು ಕೆಳಕಂಡಂತೆ ನಿರ್ವಹಿಸುವುದು.

**ಅ) ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವುದು**

ದಿನಾಂಕ: 06.06.2026ರ ವರೆಗಿನ ದಾಖಲಾತಿ ಪ್ರಕ್ರಿಯೆಯನ್ನು ಆಧರಿಸಿ, ಹಿಂದಿನ ಸಾಲಿನಲ್ಲಿ ಉತ್ತೀರ್ಣರಾಗಿ ಶಾಲೆಗೆ ಬಾರದಿರುವ ಮಕ್ಕಳು, ಶಾಲೆಗೆ ದಾಖಲಾಗದಿರುವ ಅರ್ಹ ವಯಸ್ಸಿನ ಮಕ್ಕಳ ಮತ್ತು ಶಾಲೆ ಬಿಟ್ಟ ಮಕ್ಕಳ ಪಟ್ಟಿಯನ್ನು ಹಾಜರಾತಿ ಅಧಿಕಾರಿಗಳಾದ ಶಿಕ್ಷಣ ಸಂಯೋಜಕರುಗಳಿಂದ ಪಡೆದು ಅನುಪಾಲನೆಗೆ ಸಿದ್ಧಪಡಿಸಿಕೊಳ್ಳುವುದು ಮತ್ತು ಎಸ್.ಎ.ಟಿ.ಎಸ್.ನಲ್ಲಿ ಇಂದೀಕರಿಸುವುದು.

1. ಶಿಕ್ಷಕರು, ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಸಹಯೋಗದೊಂದಿಗೆ ಇಂತಹ ಮಕ್ಕಳ ಮನೆ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಿ ಶಾಲೆಗೆ ದಾಖಲಿಸುವುದು.

2. ಶಾಲಾ ಪ್ರಾರಂಭದ ಅವಧಿಗೆ ಮುಂಚಿತವಾಗಿ ಅದೇ ದಿನ ಜಾಥಾ, ಘೋಷಣೆ ಮತ್ತು ಭಿತ್ತಿಪತ್ರ/ ಕರಪತ್ರಗಳನ್ನು ಹಂಚುವ ಮೂಲಕ ಶಾಲಾ ಶಿಕ್ಷಣದ ಪ್ರಾಮುಖ್ಯತೆ ತಿಳಿಸುವುದು ಹಾಗೂ ದಾಖಲಾತಿ ಅಂದೋಲನವನ್ನು ಅರ್ಥಪೂರ್ಣಗೊಳಿಸುವುದು.

**ಆ) ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳ ಕುರಿತು**

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಸರ್ಕಾರದ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಪ್ರೋತ್ಸಾಹದಾಯಕ ಯೋಜನೆಗಳಾದ ಉಚಿತ ಸಮವಸ್ತ್ರ, ಪಠ್ಯಪುಸ್ತಕ ಮಧ್ಯಾಹ್ನ ಉಪಾಹಾರ ಯೋಜನೆ, ಕ್ಷೀರಭಾಗ್ಯ ಶೂ & ಸಾಕ್ಸ್ ಗಳಂತಹ ಸೌಲಭ್ಯಗಳು ಶೈಕ್ಷಣಿಕ ವರ್ಷದ ಮೊದಲ ದಿನದಂದು ಅಥವಾ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಲಭ್ಯವಿರುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು ಹಾಗೂ ಶಾಲೆ ಪ್ರಾರಂಭಕ್ಕೆ ಸರಿಯಾಗಿ ವಿತರಿಸತಕ್ಕದ್ದು ಹಾಗೂ ಸಮವಸ್ತ್ರ ಪಾಲನೆ ಬಗ್ಗೆ ಶಿಕ್ಷಕರು ಪ್ರತಿದಿನ ನಿಗಾವಹಿಸತಕ್ಕದ್ದು.

**ಇ) ಸ್ಥಳೀಯ ಮಕ್ಕಳನ್ನು ಶಾಲೆಗೆ ದಾಖಲಿಸುವ ಕಾರ್ಯಕ್ರಮ**

ಪ್ರತಿ ಸರ್ಕಾರಿ ಶಾಲೆಗೆ ಹೊಂದಿಕೊಂಡಿರುವ ಪ್ರದೇಶಗಳ ಹಾಗೂ ಅಕ್ಕ-ಪಕ್ಕದ ಪ್ರದೇಶಗಳ ಸಮೀಕ್ಷೆ ನಡೆಸಿ 6-14 ರ ವಯೋಮಾನದ ಮಕ್ಕಳು ಹತ್ತಿರದ ಶಾಲೆಗೆ ಸೇರಿರುವುದನ್ನು ಹಾಗೂ ಯಾವುದೇ ಮಗುವೂ ಸಹ ಶಾಲೆಯಿಂದ ಹೊರಗುಳಿದಿಲ್ಲ ಎಂಬ ಅಂಶವನ್ನು ಪರಿಶೀಲಿಸಿ ಖಚಿತವಡಿಸಿಕೊಳ್ಳತಕ್ಕದ್ದು ಮಕ್ಕಳ ಸಭೆ, ಮಕ್ಕಳ ಜಾಥಾ, ಶಾಲೆ ಬಿಟ್ಟ ಮಕ್ಕಳ ಮನೆ ಭೇಟಿ, ವಲಸೆ ಬಂದಿರುವ ಹಾಗೂ ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಲು ಪೋಷಕರಿಗೆ ಮತ್ತು ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದು, ದಾನಿಗಳ ಹಾಗೂ ಹಳೆ ವಿದ್ಯಾರ್ಥಿಗಳ ಸಹಾಯದಿಂದ ಬಾಲಕರಿಗೆ ಬಸ್ ಪಾಸ್ ವ್ಯವಸ್ಥೆ ಕಲ್ಪಿಸುವುದು ಮಳೆಬಿಲ್ಲು ಕಲಿಕಾ ಹಬ್ಬ ಹಾಗೂ ಸಂಭ್ರಮದ ಶನಿವಾರ ಈ ಕಾರ್ಯಕ್ರಮಗಳ ಅನುಭವದ ಆಧಾರದ ಮೇಲೆ ಮಕ್ಕಳನ್ನು, ಪಾಲಕರನ್ನು ಆಕರ್ಷಿಸುವ ಕಾರ್ಯಕ್ರಮಗಳನ್ನು ಶಿಕ್ಷಕರು ಹಮ್ಮಿಕೊಂಡು ಶಾಲೆಯಲ್ಲಿ ದಾಖಲಾತಿ ಹೆಚ್ಚಾಗುವಂತೆ ಕ್ರಿಯಾಯೋಜನೆ ರೂಪಿಸಿಕೊಳ್ಳುವುದು ಸ್ಥಳೀಯ ಮಕ್ಕಳನ್ನು ಶಾಲೆಗೆ ದಾಖಲಿಸುವಂತಹ ಕಾರ್ಯಕ್ರಮಗಳನ್ನು ಎಸ್.ಡಿ.ಎಂ.ಸಿ ಸಹಕಾರದೊಂದಿಗೆ ಶಾಲಾ ಮೇಲುಸ್ತುವಾರಿ ಅಧಿಕಾರಿಗಳು ಹಾಜರಾತಿ ಅಧಿಕಾರಿಗಳು, ಆಯಾ ಶಾಲಾ ಮುಖ್ಯಸ್ಥರು ಹಾಗೂ ಶಿಕ್ಷಕರು ಕ್ರಮ ಕೈಗೊಳ್ಳತಕ್ಕದ್ದು.

**ಈ) ಎಲ್ಲಾ ಸರ್ಕಾರಿ ಶಾಲೆಗಳಲ್ಲಿನ ಅಂತಿಮ ತರಗತಿಗಳಲ್ಲಿನ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ದಾಖಲಿಸುವ ಕುರಿತು**

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಅಂತಿಮ ತರಗತಿ ಅಂದರೆ ಶಾಲೆಗಳು 1-5, 1-6, 1-7 ಮತ್ತು 1- 8 ಈ ತರಗತಿಗಳನ್ನು ಹೊಂದಿರುತ್ತದೆ ಈ ಶಾಲೆಗಳಲ್ಲಿನ ಅಂತಿಮ ತರಗತಿಯಾದ 5 / 6 / 7 / 8ನೇ ತರಗತಿಯಲ್ಲಿ ಹಿಂದಿನ ವರ್ಷ ಅಂದರೆ 2025-26 ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಎಲ್ಲಾ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಹತ್ತಿರದ ಶಾಲೆಯಲ್ಲಿ ದಾಖಲಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವುದು ಒಂದು ವೇಳೆ ವಿದ್ಯಾರ್ಥಿ ಯಾವುದೇ ಶಾಲೆಗೆ ದಾಖಲಾಗದೇ ಇದ್ದಲ್ಲಿ ಆ ವಿದ್ಯಾರ್ಥಿಯನ್ನು ಹತ್ತಿರದ ಸರ್ಕಾರಿ ಶಾಲೆಯಲ್ಲಿ ಮುಂದಿನ ತರಗತಿಗೆ ದಾಖಲಿಸಲು ಈ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿದ್ದ ಹಿಂದಿನ ಶಾಲೆಯ ಮುಖ್ಯ ಶಿಕ್ಷಕರು ಕ್ರಮವಹಿಸುವುದು ಹಾಗೂ ಈ ಕುರಿತಾದ ಅಂಕಿ ಅಂಶಗಳನ್ನು ಒಳಗೊಂಡ ದಾಖಲೆಯನ್ನು ನಿರ್ವಹಿಸುವುದು.

**ಉ) ಸರ್ಕಾರಿ ಶಾಲೆಗಳ ಮತ್ತು ಅಲ್ಲಿ ಲಭ್ಯವಿರುವ ಸೌಲಭ್ಯಗಳ ಕುರಿತು ವ್ಯಾಪಕ ಪ್ರಚಾರ ಮಾಡುವುದು**

ಈ ಸಂದರ್ಭದಲ್ಲಿ ಶಿಕ್ಷಣದ ಮಹತ್ವದ ಕುರಿತು ವಿಶೇಷವಾಗಿ ಹೆಣ್ಣು ಮಗುವಿನ ಶಿಕ್ಷಣ, ಸರ್ಕಾರಿ ಶಾಲೆಗಳಲ್ಲಿ ಲಭ್ಯವಿರುವ ಉಚಿತ & ಗುಣಮಟ್ಟದ ಶಿಕ್ಷಣ, ಸ್ಥಳೀಯವಾಗಿ ಲಭ್ಯವಿರುವ ಉತ್ತಮ ಸರ್ಕಾರಿ ಶಾಲೆಗಳು, ಸಿ.ಎಸ್ ಆರ್ ಹಾಗೂ ಹಳೆ ವಿದ್ಯಾರ್ಥಿಗಳ ಸಂಘಗಳ ಅಡಿಯಲ್ಲಿ ಸರ್ಕಾರಿ ಶಾಲೆಗಳನ್ನು ಅಮೂಲಾಗ್ರವಾಗಿ ಅಭಿವೃದ್ಧಿಪಡಿಸುತ್ತಿರುವ ಬಗ್ಗೆ, ನಮ್ಮ ಶಾಲೆ ನಮ್ಮ ಜವಾಬ್ದಾರಿ ಕಾರ್ಯಕ್ರಮದ ಆಯಾ ಸರ್ಕಾರಿ ಶಾಲೆಗಳ ವಿಶೇಷತೆಗಳು ಬೋಧನಾ ಸೌಲಭ್ಯ, ಗಣಕಯಂತ್ರ ಶಿಕ್ಷಣ, ಗ್ರಂಥಾಲಯ ಕ್ರೀಡಾ ಪರಿಕರಗಳು, ಇ-ಕಲಿಕೆ ಸೌಲಭ್ಯಗಳು ಸೇರಿದಂತೆ ಲಭ್ಯವಿರುವ ಸೌಲಭ್ಯಗಳು ನಿಕಟಪೂರ್ವ ವಿದ್ಯಾರ್ಥಿಗಳ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿನ ಸಾಧನೆಗಳು, ಶೈಕ್ಷಣಿಕ ಕ್ರೀಡೆ ವಿಜ್ಞಾನ ಪ್ರತಿಭಾ ಕಾರಂಜಿ, ಸಹಪಠ್ಯ ಚಟುವಟಿಕೆ ಹಾಗೂ ಮತ್ತಿತರ ರಂಗಗಳಲ್ಲಿನ ಸಾಧನೆಗಳು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಆಯಾ ಶಾಲೆಯ ಹಳೆಯ ವಿದ್ಯಾರ್ಥಿಗಳ ಕುರಿತು ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳು, ಸರ್ಕಾರಿ ಶಾಲೆಗಳ ಸೌಲಭ್ಯಗಳ ಕುರಿತಾದ ಆಕರ್ಷಕ ಭಿತ್ತಿ ಪತ್ರಗಳನ್ನು ಮತ್ತು ಕರಪತ್ರಗಳನ್ನು ದಾಖಲಾತಿ ಆಂದೋಲನದ ಸಮಯದಲ್ಲಿ ನೀಡುವುದರ ಮೂಲಕ ಪೋಷಕರಿಗೆ, ಸ್ಥಳೀಯರಿಗೆ ಮತ್ತು ಸಮುದಾಯಕ್ಕೆ ಜಾಗೃತಿ ಮೂಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಸ್ಥಳೀಯ ಸರ್ಕಾರಿ ಶಾಲೆಗಳಿಗೆ ದಾಖಲಾಗುವಂತೆ ಪ್ರೇರೇಪಿಸುವುದು ಈ ಸಂದರ್ಭದಲ್ಲಿ ಅಗತ್ಯಾನುಸಾರ ಗ್ರಂಥಾಲಯದ ಗ್ರಂಥಪಾಲಕರ, ಸ್ಥಳೀಯ ಸಂಸ್ಥೆಗಳ ಜಿಲ್ಲಾಡಳಿತದ ಮತ್ತು ಸಂಬಂಧಿಸಿದ ಇಲಾಖೆಗಳ ಸಹಕಾರ ಸಹಯೋಗವನ್ನು ಪಡೆಯತಕ್ಕದ್ದು

2019-20ನೇ ಸಾಲಿನಿಂದ ಇಲ್ಲಿಯವರೆಗೆ ಹಾಲಿ ನಡೆಯುತ್ತಿರುವ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲಮಾಧ್ಯಮ(Bilingual) ತರಗತಿಗಳನ್ನು ನಡೆಸಲು ಅನುಮತಿ ನೀಡಿರುವ ಶಾಲೆಗಳಲ್ಲಿ ತರಗತಿಗಳು ಪ್ರಾರಂಭವಾಗಿರುವ ಬಗ್ಗೆ ಪರಿಶೀಲಿಸಿಕೊಳ್ಳತಕ್ಕದ್ದು ಹಾಗೂ ಇನ್ನೂ ಪ್ರಾರಂಭವಾಗದಿದ್ದಲ್ಲಿ ಕಡ್ಡಾಯವಾಗಿ 2026-27ನೇ ಸಾಲಿನಲ್ಲಿ ಪ್ರಾರಂಭಿಸಲು ಕ್ರಮವಹಿಸತಕ್ಕದ್ದು. ಈ ಶಾಲೆಗಳಲ್ಲಿನ ಶಿಕ್ಷಕರಲ್ಲಿ EMPTIP ತರಬೇತಿಯಾಗಿರುವ ಶಿಕ್ಷಕರು ಇರುವ ಬಗ್ಗೆ ಪರಿಶೀಲಿಸಿಕೊಳ್ಳತಕ್ಕದ್ದು ಹಾಗೂ ತರಬೇತಿ ಹೊಂದಿಲ್ಲದ ಶಿಕ್ಷಕರ ಮಾಹಿತಿಯನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ ಡಯಟ್ ಪ್ರಾಂಶುಪಾಲರಿಗೆ ಸಲ್ಲಿಸಿ ತರಬೇತಿ ಪಡೆಯಲು ಅಗತ್ಯ ಕ್ರಮವಹಿಸತಕ್ಕದ್ದು.

2026-27ನೇ ಸಾಲಿಗೆ ಒಟ್ಟು ಸುಮಾರು 24328 ಶಾಲೆಗಳು (ಪಿ .ಎಂ. ಶ್ರೀ, ಇ.ಸಿ.ಸಿ.ಇ, ಕೆ.ಪಿ.ಎಸ್, ಶಾಲೆಗಳು ಒಳಗೊಂಡಂತೆ - 15 ಜಿಲ್ಲೆಗಳ 1 ರಿಂದ 5ನೇ ತರಗತಿ-ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ರಾಮನಗರ, ಹಾವೇರಿ, ಕಲಬುರಗಿ, ಶಿವಮೊಗ್ಗ, ಹಾಸನ, ತುಮಕೂರು, ದಕ್ಷಿಣ ಕನ್ನಡ, ಕೋಲಾರ, ಧಾರವಾಡ, ಬಾಗಲಕೋಟೆ, ವಿಜಯಪುರ, ಕೊಪ್ಪಳ) ಹಾಗೂ CEPMIZ ತಾಲ್ಲೂಕುಗಳಾದ ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಮೊಳಕಾಲ್ಮೂರು, ಬಳ್ಳಾರಿ, ಸಂಡೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು, ಹೊಸಪೇಟೆ,ಯ 686 ಶಾಲೆಗಳಲ್ಲಿ ಏಕ ದರ್ಜೆ ತರಗತಿ ಹಾಗೂ 25014 ಶಾಲೆಗಳಲ್ಲಿ 1 ರಿಂದ 5ನೇ ತರಗತಿಗೆ Bilingual ಕನ್ನಡ-ಇಂಗ್ಲೀಷ್ ಮತ್ತು ಉರ್ದು-ಇಂಗ್ಲೀಷ್ ಬೋಧನ ಪದ್ಧತಿ ಜಾರಿಗೆ ತರಲು ಕ್ರಮವಹಿಸುವುದು ಮಕ್ಕಳನ್ನು ದಾಖಲಾತಿ ಮಾಡಿಕೊಂಡು ಪೋಷಕರಿಗೆ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಪಡಿಸುವುದು.

2025-26ನೇ ಸಾಲಿನ ಆಯವ್ಯಯ ಕಂಡಿಕೆ ಸಂಖ್ಯೆ111(i) ರಂತೆ ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು (LKG ಮತ್ತು UKG) ಪ್ರಾರಂಭಿಸುವುದು ಹಾಗೂ ದಾಖಲಾತಿ ಮಾಡಿಕೊಂಡು ಪೋಷಕರಿಗೆ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಪಡಿಸುವುದು.

ರಾಜ್ಯದಲ್ಲಿರುವ ಆಯ್ದ ಸರ್ಕಾರಿ ಶಾಲೆಗಳನ್ನು (ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 200 ಶಾಲೆಗಳನ್ನು ಹಾಗೂ ರಾಜ್ಯದ ಇತರೆಡೆ 500 ಶಾಲೆಗಳನ್ನು ) ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಿ ಹೆಚ್ಚುವರಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದ್ದು ಕ್ರಮವಹಿಸುವುದು ಮಕ್ಕಳನ್ನು ದಾಖಲಾತಿ ಮಾಡಿಕೊಂಡು ಪೋಷಕರಿಗೆ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಪಡಿಸುವುದು

6. **ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ಆನ್ ಲೈನ್ ಹಾಜರಾತಿ ನಿರ್ವಹಿಸುವ ಬಗ್ಗೆ**

ರಾಜ್ಯ ಸರ್ಕಾರದ ಆಯವ್ಯಯ ಘೋಷಣೆ ಕಂಡಿಕೆ-112ರಂತೆ ರಾಜ್ಯ ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜು ವಿದ್ಯಾರ್ಥಿಗಳ ಹಾಜರಾತಿಯನ್ನು AI-Based Student Facial Attendance Monitoring System ಮೊಬೈಲ್ ಅಪ್ಲಿಕೇಷನ್ ಮೂಲಕ ದಾಖಲಿಸುವ "ನಿರಂತರ" ಕಾರ್ಯಕ್ರಮವನ್ನು Center for E-Governance ಮೂಲಕ ಅನುಷ್ಠಾನ ಮಾಡಿದ್ದು, ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರುಗಳು ಹಾಗೂ ಎಲ್ಲಾ ಅನುಷ್ಠಾನಾಧಿಕಾರಿಗಳು ಕಡ್ಡಾಯವಾಗಿ ಕ್ರಮ ವಹಿಸುವುದು.

**7. ಸೇತುಬಂಧ ಶಿಕ್ಷಣ**

i. 1 ರಿಂದ 3ನೇ ತರಗತಿಗಳಿಗೆ 30 ದಿನಗಳು ಹಾಗೂ 4 ರಿಂದ 10ನೇ ತರಗತಿಗಳಿಗೆ 15 ದಿನಗಳು ಮಾತ್ರ ಸೇತುಬಂಧ ಶಿಕ್ಷಣವನ್ನು ಇಲಾಖೆ ನಿಗಧಿಪಡಿಸಿದ ಮಾರ್ಗಸೂಚಿಯಂತೆ ನಿರ್ವಹಿಸುವುದು.
ii. ಶಿಕ್ಷಕರ ಬಳಿ ಕಳೆದ ಸಾಲಿನಲ್ಲಿ ನಡೆಸಿದ ಮೌಲ್ಯಾಂಕನ ವಿಶ್ಲೇಷಣೆಯ ವರದಿಯಂತೆ ಕಲಿಕಾ ಕೊರತೆಗಳ ದತ್ತಾಂಶಗಳು ಲಭ್ಯವಿರುತ್ತವೆ. ಇವುಗಳನ್ನು ಅವಲೋಕಿಸಿ, ವಿಶ್ಲೇಷಿಸುವುದು. ಇದಕ್ಕೆ ಪೂರಕವಾಗಿ ನೈದಾನಿಕ ಪರೀಕ್ಷೆ ಹಮ್ಮಿಕೊಂಡು ಫಲಿತಾಂಶ ವಿಶ್ಲೇಷಿಸಬೇಕು.
iii. 1ರಿಂದ 3ನೇ ತರಗತಿಗೆ ದಿನಾಂಕ:06.06.2026ರಂದು, ಪ್ರತಿ ಮಗುವಿನ ಕಲಿಕಾ ಸ್ತರವನ್ನು ಪರಿಶೀಲಿಸಿಕೊಂಡು ಕಲಿಕಾ ಹಿನ್ನಡೆ ಗುರುತಿಸಿ ಪರಿಹಾರ ಬೊಧನೆ ನೀಡುವುದು. ನಂತರ ದಿನಾಂಕ:20.06.2026ರಂದು ಗಳಿಸಿರುವ ಒಟ್ಟಾರೆ ಕಲಿಕಾ ಸಾಮರ್ಥವನ್ನು ಖಾತ್ರಿಪಡಿಸಿಕೊಳ್ಳುವುದು.
iv. 4 ರಿಂದ 10ನೇ ತರಗತಿಗೆ ದಿನಾಂಕ:06.06.2026ರಂದು ಪೂರ್ವ ಪರೀಕ್ಷೆ ನಡೆಸಿ, ವಿಶ್ಲೇಷಿಸಿ ಕಲಿಕಾ ಹಿನ್ನಡೆ ಗುರುತಿಸಿ ಪರಿಹಾರ ಬೊಧನೆ ನೀಡುವುದು. ನಂತರ ದಿನಾಂಕ:13.06.2026ರಂದು ಸಾಫಲ್ಯ ಪರೀಕ್ಷೆ ನಡೆಸಿ ವಿಶ್ಲೇಷಿಸಿ ನಿರಂತರ ಪರಿಹಾರ ಬೋಧನೆಗೆ ಅಗತ್ಯ ಮಕ್ಕಳನ್ನು ಗುರುತಿಸುವುದು.
v. 2026-27ನೇ ಶೈಕ್ಷಣಿಕ ಸಾಲಿಗೆ ವಾರ್ಷಿಕ ಪಠ್ಯವಸ್ತುವನ್ನು ರಾಜ್ಯಾದ್ಯಂತ ಏಕರೂಪದಲ್ಲಿ ಅಳವಡಿಸಿಕೊಳ್ಳಲು ಸಲಹಾತ್ಮಕವಾಗಿ ಮಾಹೆವಾರು ಪಾಠ ಹಂಚಿಕೆಮಾಡಿ ನಿಗದಿಪಡಿಸಲಾಗುವುದು. ಅದರಂತೆ FA-1, FA-2, FA-3 FA-4, ಮತ್ತು SA-1 SA-2 ಪರೀಕ್ಷೆ ಮೌಲ್ಯಾಂಕನಗಳನ್ನು ನಿಗದಿಪಡಿಸಿದ ಪಠ್ಯವಸ್ತುಗನುಗುಣವಾಗಿ ನಿರ್ವಹಿಸತಕ್ಕದ್ದು ಈ ಮಾಹಿತಿಯನ್ನು ಕಡ್ಡಾಯವಾಗಿ SATS ತಂತ್ರಾಂಶದಲ್ಲಿ ಇಂಧೀಕರಿಸಿ ದೃಢೀಕರಿಸತಕ್ಕದ್ದು.

**8. ಮಿಂಚಿನ ಸಂಚಾರ ಉದ್ದೇಶ**

**ಉದ್ದೇಶ:** ಪ್ರಸ್ತುತ ಸಾಲಿನ ಶಾಲಾ ಶೈಕ್ಷಣಿಕ ಚಟುವಟಿಕೆಗಳು ಮೇಲ್ಕಂಡಂತೆ ಸಕ್ರಿಯಗೊಂಡಿರುವ ಹಿನ್ನೆಲೆಯಲ್ಲಿ ಶಾಲಾವಾರು ಖಚಿತಪಡಿಸಿಕೊಳ್ಳಲು ಮಿಂಚಿನ ಸಂಚಾರ ತ್ವರಿತ ಸಂದರ್ಶನ (Flying visit ) ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮುಖ್ಯವಾಗಿ ಈ ಶಾಲಾ ಸಂದರ್ಶನ ಪ್ರಸಕ್ತ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಪೂರ್ವಸಿದ್ಧತೆ, ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ, ಬೋಧನಾ ಕಲಿಕಾ ಚಟುವಟಿಕೆಗಳ ಪೂರ್ವ ಸಿದ್ದತೆ, ಇಲ್ಲಿಯವರೆಗಿನ ಪ್ರಗತಿ, ಶಾಲಾ ಮೂಲಭೂತ ಸೌಕರ್ಯಗಳು **(ಮಳೆಗಾಲ ಪ್ರಾರಂಭವಾಗಿರುವುದರಿಂದ ಶಿಥಿಲಗೊಂಡ ಕಟ್ಟಡಗಳು/ಮಕ್ಕಳ ಸುರಕ್ಷತೆ ಬಗ್ಗೆ)** ಅಕ್ಷರ ದಾಸೋಹ ಕಾರ್ಯಕ್ರಮಗಳು, ಹಾಗೂ ಇತರೆ ಪ್ರೋತ್ಸಾಹದಾಯಕ ಯೋಜನೆಗಳ ಅನುಷ್ಠಾನಗೊಂಡಿರುವ ಬಗ್ಗೆ ಪರಿಶೀಲಿಸುವುದಾಗಿದೆ. ಮುಂದುವರೆದು 2025-26ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ಮಂಜೂರಿಸಿರುವ ಉನ್ನತೀಕರಿಸಿದ ಶಾಲೆಗಳು, ದ್ವಿಭಾಷಾ ಮಾಧ್ಯಮ ತರಗತಿಯ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಅಗತ್ಯ ಪೂರ್ವ ಸಿದ್ಧತೆಯೊಂದಿಗೆ ನಡೆಯುತ್ತಿರುವ ಕುರಿತಂತೆ ಶೈಕ್ಷಣಿಕ ಮೇಲ್ವಿಚಾರಣಾ ಅಧಿಕಾರಿ/ಸಿಬ್ಬಂದಿಗಳು ಖುದ್ದು ಪರಿಶೀಲಿಸಿ ಪ್ರಗತಿ ಹಂಚಿಕೊಳ್ಳುವುದರೊಂದಿಗೆ ಕಡಿಮೆ ಸಾಧನೆಗೈದ ಶಾಲೆಗಳ ಪಟ್ಟಿಯನ್ನು ತಯಾರಿಸಿಟ್ಟುಕೊಂಡು ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದಾಗಿದೆ.

**ಸಂದರ್ಶನ ಸಪ್ತಾಹ/ಶಾಲಾ ಸಂದರ್ಶನದ ಉದ್ದೇಶ**

ಶಾಲಾ ಸಂದರ್ಶನ ಸಪ್ತಾಹ ಕಾರ್ಯಕ್ರಮವು ಸಂಪೂರ್ಣವಾಗಿ ಶೈಕ್ಷಣಿಕ ಪ್ರಗತಿಯ ಪರಿಶೀಲನೆಯಾಗಿದ್ದು ಆಯಾ ಜಿಲ್ಲೆಗಳಲ್ಲಿ ಒಂದು ವಾರಗಳ ಕಾಲ ತಂಡದಲ್ಲಿ ದಿನವೊಂದಕ್ಕೆ ತಲಾ ಒಂದು ತಾಲ್ಲೂಕಿನಲ್ಲಿ ಮಿಂಚಿನ ಸಂಚಾರದಡಿ ಗುರುತಿಸಿದ ಕಡಿಮೆ ಪ್ರಗತಿ ಸಾಧಿಸಿದ ಶಾಲೆಗಳಲ್ಲಿ ಆಯ್ದು ಕೆಲವು ಶಾಲೆಗಳನ್ನು ಅನಿರೀಕ್ಷಿತವಾಗಿ ಸಂದರ್ಶಿಸಿ ಮಕ್ಕಳ ಕಲಿಕಾ ಪ್ರಗತಿಯನ್ನು ಪರಿಶೀಲಿಸುವುದಾಗಿದೆ.

**9. ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಅನುಷ್ಠಾನಾಧಿಕಾರಿಗಳು ಶಾಲಾ ಭೇಟಿ ಸಂದರ್ಭದಲ್ಲಿ ಪರಿವೀಕ್ಷಣಾ ಮಾಹಿತಿಯನ್ನು ಇಂದೀಕರಿಸುವ ಬಗ್ಗೆ**

ಮೊಬೈಲ್ ಆಪ್ ಮೂಲಕ ಕ್ಷೇತ್ರದಲ್ಲಿರುವ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರು/ ಜಂಟಿ ನಿರ್ದೇಶಕರುಗಳು ಪರಿವೀಕ್ಷಣಾ ಆಪ್ (Inspection App)ಅನ್ನು ಬಳಸಿ ಮಾಹಿತಿ ಇಂದೀಕರಿಸಲು ಕ್ರಮ ವಹಿಸುವುದು

**ಕಾರ್ಯ ಯೋಜನೆ ರೂಪಿಸುವಿಕೆ**

ಸಿ.ಟಿ.ಇ. ಕಾಲೇಜಿನ ಪ್ರಾಂಶುಪಾಲರು, ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಶಾಲಾ ಉಸ್ತುವಾರಿ ಸಿಬ್ಬಂದಿಯವರು ಸಭೆಯನ್ನು ನಡೆಸಿ ಕಾರ್ಯಕ್ರಮದ ರೂಪುರೇಷೆಗಳನ್ನು ಕೆಳಕಂಡಂತೆ ಆಯೋಜಿಸುವುದು.

**ಮಿಂಚಿನ ಸಂಚಾರ**

i. ಮಿಂಚಿನ ಸಂಚಾರ ಕಾರ್ಯಕ್ರಮವು ಆಯಾ ಕ್ಲಸ್ಟರ್ ಹಂತದಿಂದ ಜಿಲ್ಲಾ ಹಂತದವರೆಗೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳು ಅನಿರೀಕ್ಷಿತವಾಗಿ ತಮ್ಮ ವ್ಯಾಪ್ತಿಯಲ್ಲಿ

ದಿನವೊಂದಕ್ಕೆ 4 ಶಾಲೆಗಳನ್ನು ಸಂದರ್ಶಿಸುವ ಕಾರ್ಯಕ್ರಮವಾಗಿದೆ.

ii. ಈ ಕಾರ್ಯಕ್ರಮದಡಿಯಲ್ಲಿ ಶಾಲೆಯ ಸಮಗ್ರ ತಪಾಸಣೆ/ಪರಿಶೀಲನೆ ಮಾಡದೆ ಶಾಲೆಯ ಪ್ರಾಥಮಿಕ ಚಟುವಟಿಕೆಗಳ ನಿರ್ವಹಣೆ ಕುರಿತು ವರದಿ ದಾಖಲಿಸುವುದಾಗಿದೆ.

iii. ಈ ಕಾರ್ಯಕ್ರಮವನ್ನು ಸಿ.ಆರ್.ಪಿ ಯಿಂದ ಡಿ.ಡಿ.ಪಿ.ಐ ವರೆಗೆ ವೈಯಕ್ತಿಕವಾಗಿ ಮಾರ್ಗ ನಕ್ಷೆ ತಯಾರಿಸಿಕೊಂಡು ಶಾಲೆಗಳನ್ನು ತ್ವರಿತವಾಗಿ ಸಂದರ್ಶಿಸುವುದಾಗಿದೆ.

iv. ಅಂತಿಮವಾಗಿ ನಿಗಧಿಪಡಿಸಿದ ಚೆಕ್‌ಲಿಸ್ಟ್‌ನಲ್ಲಿ ಪ್ರಗತಿ ವರದಿ ದಾಖಲಿಸಿಕೊಂಡು, ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ತಾಲ್ಲೂಕುವಾರು ಮಾಹಿತಿ ವಿನಿಮಯ ಮಾಡಿ ಕಲಿಕೆಯಲ್ಲಿ ಹಿಂದುಳಿದ ಶಾಲೆಗಳ ಕಾರಣ ಮತ್ತು ಪರಿಹಾರಗಳನ್ನು ಗುರುತಿಸಿಕೊಂಡು ಅನುಪಾಲನೆ ಮಾಡುವುದಾಗಿದೆ.

**ಸಂದರ್ಶನ ಸಪ್ತಾಹ/ಶಾಲಾ ಸಂದರ್ಶನ**

i. ಶಾಲಾ ಸಂದರ್ಶನ ಸಪ್ತಾಹ/ಶಾಲಾ ಸಂದರ್ಶನವು ಪರಿಪೂರ್ಣವಾಗಿ ಶಾಲೆಯ ಬೋಧನಾ ಕಲಿಕಾ ಚಟುವಟಿಕೆಗಳ ತಪಾಸಣೆಯಾಗಿದ್ದು ಕಲಿಕಾ ಪ್ರಗತಿಯ ಕೇಂದ್ರಿಕರಿಸುವುದಾಗಿದೆ.

ii. ಸದರಿ ಕಾರ್ಯಕ್ರಮವನ್ನು ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಉಪನಿರ್ದೇಶಕರ ನೇತೃತ್ವದಲ್ಲಿ ಮಾರ್ಗನಕ್ಷೆಯನ್ನು ಮಿಂಚಿನ ಸಂಚಾರದಡಿ ಗುರುತಿಸಿದ "ಸಿ" ಶ್ರೇಣಿಯ ಅಂದರೆ ಕಲಿಕೆಯಲ್ಲಿ ಹಿಂದುಳಿದಿರುವ ಶಾಲೆಗಳನ್ನು ಆಧ್ಯತೆ ಮೇಲೆ ಸಂದರ್ಶಿಸುವುದಾಗಿದೆ.

iii. ಸಂದರ್ಶನ ಸಮಯದಲ್ಲಿ ಕಡ್ಡಾಯವಾಗಿ ತಂಡದಲ್ಲಿ ವಿಷಯವಾರು ಸಂಪನ್ಮೂಲ ಶಿಕ್ಷಕರುಗಳನ್ನೊಳಗೊಂಡಂತೆ ತಂಡ ರಚಿಸಿಕೊಂಡು ಶಾಲೆಗಳ ಸಂದರ್ಶನ ನೀಡಿ ಬೋಧನಾ ಕಲಿಕಾ ಚಟುವಟಿಕೆಗಳನ್ನು ವಿಷಯವಾರು ಸಂಪನ್ಮೂಲ ಶಿಕ್ಷಕರು ಪರಿಶೀಲಿಸಿ ಮಾರ್ಗದರ್ಶನ ಮಾಡುವುದಾಗಿದೆ.

iv. ಕಾರ್ಯಕ್ರಮದ ಹೆಸರೇ ಹೇಳುವಂತೆ ಒಂದು ವಾರಗಳ ಕಾಲ ತಂಡಗಳು ಪ್ರತಿ ದಿನ ತಲಾ ಒಂದೊಂದು ತಾಲ್ಲೂಕಿನ ಆಯ್ದ ಪ್ರಾಥಮಿಕ/ಪ್ರೌಢ ಶಾಲೆಗಳನ್ನು ಸಂದರ್ಶಿಸುವುದಾಗಿದೆ.

v. ಮಾರ್ಗ ನಕ್ಷೆಯನ್ನು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗುರುತಿಸಿ ಉಪನಿರ್ದೇಶಕರಿಗೆ ನೀಡುವುದು. ತದನಂತರ ಉಪನಿರ್ದೇಶಕರು ಪ್ರತಿ ತಂಡಕ್ಕೆ ಸಂದರ್ಶಿಸಬೇಕಾದ ಶಾಲೆಗಳ ಮಾರ್ಗ ನಕ್ಷೆಯನ್ನು ದಿನವೊಂದಕ್ಕೆ 3 ಶಾಲೆಗಳಂತೆ (ಎರಡು ಪ್ರಾಥಮಿಕ , ಒಂದು ಪ್ರೌಢ) ಸಂದರ್ಶಿಸುವುದಾಗಿದೆ.

vi. ನಿಗಧಿಪಡಿಸಿದ ಮಾರ್ಗ ನಕ್ಷೆ (Route Map)ಯಂತೆ ಜಿಲ್ಲೆಯೊಳಗೆ ಇಲಾಖೆಯ ಲಭ್ಯ ವಾಹನಗಳನ್ನು ಅಂದರೆ ಉಪನಿರ್ದೇಶಕರು (ಆಡಳಿತ) ಉಪನಿರ್ದೇಶಕರು (ಅಭಿವೃದ್ಧಿ) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಡಿ.ವೈ.ಪಿ.ಸಿ ಸಮಗ್ರ ಶಿಕ್ಷಣ ಕರ್ನಾಟಕ/ ಶಿಕ್ಷಣಾಧಿಕಾರಿಗಳು ಅಕ್ಷರ ದಾಸೋಹ ರವರುಗಳನ್ನೊಳಗೊಂಡಂತೆ ಲಭ್ಯ 10 ವಾಹನಗಳನ್ನು ಸದರಿ ಕಾರ್ಯಕ್ರಮಕ್ಕೆ ಆ ತಾಲ್ಲೂಕಿಗೆ ನಿಯೋಜಿಸುವುದು.

vii. ಒಂದು ವಾರಗಳ ಕಾಲ ಎಲ್ಲಾ ವಾಹನಗಳು ಏಕಕಾಲಕ್ಕೆ ಪ್ರತಿ ದಿನ ಒಂದೊಂದು ತಾಲ್ಲೂಕಿಗೆ ಅನಿರೀಕ್ಷಿತ ಸಂದರ್ಶನ ನೀಡುವುದಾಗಿದೆ. ಇದರಿಂದಾಗಿ ಉದಾಹರಣೆಗೆ ಏಕಕಾಲಕ್ಕೆ ದಿನವೊಂದಕ್ಕೆ ಆ ತಾಲ್ಲೂಕಿನ 30 ಶಾಲೆಗಳು, ಮುಂದುವರೆದು 6 ದಿನಗಳಿಗೆ 5 ತಾಲ್ಲೂಕು ಇದ್ದಲ್ಲಿ ಜಿಲ್ಲೆಗೆ ಒಟ್ಟು 150 ಶಾಲೆಗಳನ್ನು ಶೈಕ್ಷಣಿಕ ತಪಾಸಣೆ ಕೈಗೊಂಡಂತಾಗುತ್ತದೆ.

viii. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ತಂಡದ ಮುಖ್ಯಸ್ಥರಾಗಿ DDPI/BEO/EO ಇರುತ್ತಾರೆ. ಉಳಿದಂತೆ ತಂಡದಲ್ಲಿ ವಿಷಯ ಸಂಪನ್ಮೂಲ ಶಿಕ್ಷಕರನ್ನು ಆಯಾ ತಾಲ್ಲೂಕಿನಿಂದ ಆಯ್ಕೆ ಮಾಡಿ ತಂಡ ರೂಪಿಸುವುದಾಗಿರುತ್ತದೆ. ಉಳಿದಂತೆ ವಿಷಯ ಪರಿವೀಕ್ಷಕರು/ಡಯಟ್ ಉಪನ್ಯಾಸಕರುಗಳು ಉಪನಿರ್ದೇಶಕರುಗಳ ವಾಹನದಲ್ಲಿ ತಂಡದ ಸದಸ್ಯರಾಗಿರುತ್ತಾರೆ.

ix. ಶಾಲೆಗಳನ್ನು ಭೇಟಿ ಮಾಡಿ ನ್ಯೂನತೆಗಳಿದ್ದಲ್ಲಿ ಸ್ಥಳದಲ್ಲೇ ಮಾದರಿ ಪಾಠಗಳನ್ನು ಮಾಡುವುದರೊಂದಿಗೆ ಸೂಕ್ತ ಸಲಹೆ/ಮಾರ್ಗದರ್ಶನ ನೀಡುವುದರೊಂದಿಗೆ ಅಗತ್ಯ ಪರಿಹಾರಗಳನ್ನು ತಿಳಿಸುವುದು.

x. ಸದರಿ ಕಾರ್ಯಕ್ರಮವು ಸಂಪೂರ್ಣವಾಗಿ ಶೈಕ್ಷಣಿಕ ಮಾರ್ಗದರ್ಶಿಯಾಗಿದ್ದು, ಯಾವುದೇ ಶಾಲಾ ಆಡಳಿತಾತ್ಮಕ ದಾಖಲೆ ಪರಿಶೀಲಿಸುವುದು, ತಪಾಸಣೆ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ. ಅದನ್ನು ವಾರ್ಷಿಕ ತಪಾಸಣಾ ಸಂದರ್ಭದಲ್ಲಿ ತಪಾಸಣಾ ತಂಡವು ನಿರ್ವಹಿಸುವುದಾಗಿದೆ.

xi. ಈ ಕೆಳಕಂಡಂತೆ ಕಾರ್ಯಕ್ರಮ ಯಶಸ್ವಿ ಅನುಷ್ಠಾನಕ್ಕೆ ಕಾಲಮಿತಿ ನಿಗಧಿಪಡಿಸಿದ್ದು, ಅದರಂತೆ

ಉಪನಿರ್ದೇಶಕರುಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಾರಂಭದಲ್ಲಿ ಅನುಕೂಲಕರ ದಿನಗಳಂದು ದಿನಾಂಕ ನಿಗಧಿಪಡಿಸಿಕೊಂಡು ಅನಿರೀಕ್ಷಿತವಾಗಿ (Surprise Visit) ಶಾಲೆಗಳಿಗೆ ಸಂದರ್ಶನ ನೀಡುವುದು.

xii. ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ನಿಗಧಿಪಡಿಸಿದ ಕಾಲಮಿತಿ

| ಕ್ರ ಸಂ | ಕಾರ್ಯಕ್ರಮದ ಹೆಸರು | ನಿಗಧಿಪಡಿಸಿದ ದಿನಗಳು |
|---|---|---|
| | ಮಿಂಚಿನ ಸಂಚಾರ ಕಾರ್ಯಕ್ರಮ | |
| 1 | ಮಿಂಚಿನ ಸಂಚಾರ ಕಾರ್ಯಕ್ರಮದ ರೂಪುರೇಷೆ ಸಿದ್ದಪಡಿಸುವುದು | 2 ದಿನಗಳು |
| 2 | ಮಿಂಚಿನ ಸಂಚಾರ ಕೈಗೊಳ್ಳುವುದು | 4 ದಿನಗಳು |
| 3 | ಮಿಂಚಿನ ಸಂಚಾರ ಕಾರ್ಯಕ್ರಮದ ವರದಿ ವಿನಿಮಯ ಮತ್ತು ಕ್ರೂಢೀಕರಣ | 1 ದಿನ |
| 4 | ಕಾರ್ಯಕ್ರಮದ ಕುರಿತು ಆಯಾ ವಿಭಾಗಕ್ಕೆ/ ರಾಜ್ಯ ಕಛೇರಿಗೆ ವರದಿ ಸಲ್ಲಿಕೆ | 1 ದಿನ |
| | ಸಂದರ್ಶನ ಸಪ್ತಾಹ/ ಶಾಲಾ ಸಂದರ್ಶನ ಕಾರ್ಯಕ್ರಮ | |
| 5 | ಶಾಲಾ ಸಂದರ್ಶನ ಸಪ್ತಾಹ ಕಾರ್ಯಕ್ರಮದ ರೂಪುರೇಷೆ ಸಿದ್ದಪಡಿಸುವುದು | 1 ದಿನ |
| 6 | ಶಾಲಾ ಸಂದರ್ಶನ ಕೈಗೊಳ್ಳುವುದು | 6 ದಿನಗಳು |
| 7 | ಶಾಲಾ ಸಂದರ್ಶನ ಕಾರ್ಯಕ್ರಮದ ವರದಿ ವಿನಿಮಯ ಮತ್ತು ಕ್ರೂಢೀಕರಣ | 1 ದಿನ |
| 8 | ಶಾಲಾ ಸಂದರ್ಶನ ಕಾರ್ಯಕ್ರಮದ ಕುರಿತು ಆಯಾ ವಿಭಾಗಕ್ಕೆ/ ರಾಜ್ಯ ಕಛೇರಿಗೆ ವರದಿ ಸಲ್ಲಿಕೆ | 1 ದಿನ |

**ವಿಶೇಷ ಸೂಚನೆಗಳು:**

1. ಮಿಂಚಿನ ಸಂಚಾರ ಕಾರ್ಯಕ್ರಮವನ್ನು ಆಯಾ ಜಿಲ್ಲೆ/ತಾಲ್ಲೂಕು/ಕ್ಲಸ್ಟರ್‌ನೊಳಗೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು ತಮ್ಮ ವ್ಯಾಪ್ತಿಯೊಳಗೆ ನಿರ್ವಹಿಸುವುದು.
2. ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಿಂಚಿನ ಸಂಚಾರ/ಶಾಲಾ ಸಂದರ್ಶನದ ದಿನಾಂಕಗಳ ಕುರಿತು ಸಮಾಲೋಚಿಸಿ ದಿನಾಂಕವನ್ನು ನಿಗಧಿಗೊಳಿಸುವುದು.
3. ಸಂದರ್ಶನ ಸಪ್ತಾಹ ಕಾರ್ಯಕ್ರಮವನ್ನು ಜಿಲ್ಲೆಯೊಳಗಿನ ಅನುಷ್ಠಾನಾಧಿಕಾರಿಗಳು ತಮ್ಮ ವಾಹನಗಳೊಂದಿಗೆ ತಂಡ ರಚಿಸಿಕೊಂಡು ಪ್ರತಿ ದಿನಕ್ಕೆ ತಲಾ ಒಂದು ತಾಲ್ಲೂಕಿನಂತೆ ಎಲ್ಲರೂ ಎಲ್ಲಾ ತಾಲ್ಲೂಕುಗಳನ್ನು ಉಪನಿರ್ದೇಶಕರ ಸೂಚನೆಯಂತೆ ಸಂದರ್ಶಿಸುವುದಾಗಿದೆ.
4. ಸದರಿ ಸಂದರ್ಶನ ಸಪ್ತಾಹ/ಶಾಲಾ ಸಂದರ್ಶನ ಕಾರ್ಯಕ್ರಮವನ್ನು ಅಗತ್ಯಾನುಸಾರ ಸಂಪೂರ್ಣ ಶೈಕ್ಷಣಿಕ ವರ್ಷದಲ್ಲಿ ಕಾಲಕಾಲಕ್ಕೆ ಅನಿರೀಕ್ಷಿತವಾಗಿ ಕೈಗೊಳ್ಳಲು ಸೂಚಿಸಿದೆ.
5. ಅನುಷ್ಠಾನಾಧಿಕಾರಿಗಳಿಗೆ ಅನ್ಯ ಕಾರ್ಯವಿದ್ದಲ್ಲಿ ತಂಡದ ಮುಖ್ಯಸ್ಥರನ್ನಾಗಿ ಬದಲಿ ವ್ಯವಸ್ಥೆಯನ್ನು ಮಾಡಿ ವಾಹನವನ್ನು ಸಂದರ್ಶನ ಸಪ್ತಾಹ ಕಾರ್ಯಕ್ರಮಕ್ಕೆ ನಿಯೋಜಿಸಿ ತಾವುಗಳು ತಾತ್ಕಾಲಿಕ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

**ಯಾವುದೇ ಕಾರಣಕ್ಕೂ ಕಾರ್ಯಕ್ರಮಕ್ಕೆ ಅಡಚಣೆಯಾಗದಂತೆ ಕ್ರಮವಹಿಸತಕ್ಕದ್ದು**

1. ನಿಗಧಿಪಡಿಸಿದ ಚೆಕ್‌ಲಿಸ್ಟ್‌ನಂತೆ ಶಾಲಾ ಸಂದರ್ಶನ ಸಮಯದಲ್ಲಿ ಮಾಹಿತಿ ಸಂಗ್ರಹಿಸಿ ಕ್ರೂಢೀಕರಿಸಿ ಪ್ರಗತಿ ವರದಿಯನ್ನಾಧರಿಸಿ ಶಾಲೆಯನ್ನು ಶ್ರೇಣೀಕರಿಸಿ ಗೂಗಲ್ ಶೀಟ್ ನಲ್ಲಿ ಮಾಹಿತಿ ಇಂದೀಕರಿಸುವುದು.
2. ಈ ಕುರಿತಂತೆ ಚೆಕ್‌ಲಿಸ್ಟ್ ಮತ್ತು ಗೂಗಲ್ ಶೀಟ್ ನಮೂನೆಯನ್ನು ಸಿದ್ದಪಡಿಸಿ ಸಲ್ಲಿಸಲಾಗುವುದು.
3. ಶಾಲೆಗೆ ಅನಿರೀಕ್ಷಿತ ಸಂದರ್ಶನ ನೀಡಿ ನಿಗಧಿಪಡಿಸಿದ ಚೆಕ್‌ಲಿಸ್ಟ್‌ನಂತೆ ಪರಿಶೀಲಿಸಿ ಕಡಿಮೆ/ಸಾಧಾರಣ ಸಾಧನೆಗೈದ ಶಾಲೆಗಳ ಪಟ್ಟಿ ತಯಾರಿಸಿಕೊಂಡು ಮುಂದಿನ ಶಾಲಾ

ಸಂದರ್ಶನದಲ್ಲಿ ಆದ್ಯತೆ ಮೇಲೆ ಅದೇ ಶಾಲೆಗಳಿಗೆ ಸಂದರ್ಶನ ನೀಡಿ ಶೈಕ್ಷಣಿಕ ಸುಧಾರಣೆ ಕಂಡುಕೊಳ್ಳುವುದು

ಮೇಲ್ಕಂಡಂತೆ ಶಾಲಾ ಮಿಂಚಿನ ಸಂಚಾರ ಮತ್ತು ಶಾಲಾ ಸಂದರ್ಶನ ಸಪ್ತಾಹ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ನಿಗದಿಪಡಿಸಿದ ವೇಳಾಪಟ್ಟಿಯಂತೆ ಅನಿರೀಕ್ಷಿತ ಸಂದರ್ಶನವನ್ನು ಮಾಡುವುದರೊಂದಿಗೆ ಜಿಲ್ಲೆಯೊಳಗೆ/ತಾಲ್ಲೂಕಿನೊಳಗೆ ಶೈಕ್ಷಣಿಕ ಚಟುವಟಿಕೆಗಳು ಕ್ರಿಯಾಶೀಲವಾಗಿರುವಂತೆ ಕ್ರಮವಹಿಸುವುದು. ಈ ಕಾರ್ಯಕ್ರಮಗಳ ಉಸ್ತುವಾರಿಯನ್ನು ರಾಜ್ಯ ಮತ್ತು ವಿಭಾಗೀಯ ಕಛೇರಿಗಳಿಂದ ನೇಮಿಸಲ್ಪಟ್ಟ ಜಿಲ್ಲಾ ಉಸ್ತುವಾರಿ ಅಧಿಕಾರಿಗಳು ಪರಿಣಾಮಕಾರಿ ಅನುಪಾಲನೆ ಮಾಡುವುದರೊಂದಿಗೆ ರಾಜ್ಯದಲ್ಲಿ ಶೈಕ್ಷಣಿಕ ಚಟುವಟಿಕೆಗಳು ಯಶಸ್ವಿಯಾಗಲು ಮಾರ್ಗದರ್ಶನ ಮಾಡುವುದರೊಂದಿಗೆ ರಾಜ್ಯ ಕಛೇರಿಗೆ ವರದಿ ಮಾಡುವಂತೆ ಸೂಚಿಸಿದೆ.(ಮಿಂಚಿನ ಸಂಚಾರ/ಶಾಲಾ ಸಂದರ್ಶನ ಸಪ್ತಾಹ ಕಾರ್ಯಕ್ರಮದ ನಮೂನೆ ಅನುಬಂಧಿಸಿದೆ.)

**2026-27 ನೇ ಸಾಲಿನ ವಾರ್ಷಿಕ ಕಾರ್ಯಸೂಚಿ ಕುರಿತು:-**

ರಾಜ್ಯದ ಶಾಲೆಗಳಲ್ಲಿ 2026-27 ನೇ ಸಾಲಿನಲ್ಲಿ ವಾರ್ಷಿಕ ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು ಸಂಬಂಧಿಸಿದ ಇಲಾಖಾಧಿಕಾರಿಗಳು ಹಾಗೂ ಶಾಲಾ ಮುಖ್ಯಸ್ಥರು ವಹಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಸೂಚಿಸಲಾಗಿದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಸೇತುಬಂಧ ಕಾರ್ಯಕ್ರಮ ಅನುಷ್ಠಾನದ ಬಗ್ಗೆ, ವಾರ್ಷಿಕ ಕ್ರಿಯಾ ಯೋಜನೆ, ವಾರ್ಷಿಕ ಪಾಠ ಹಂಚಿಕೆ. ವಿದ್ಯಾರ್ಥಿ ಸ್ನೇಹಿ ದೈನಂದಿನ ವೇಳಾ ಪಟ್ಟಿ ಸಿದ್ಧವಾಗಿರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದರ ಮೂಲಕ ನಿಗದಿತ ವೇಳಾಪಟ್ಟಿಯಂತೆ ಬೋಧನೆಗೆ ಸನ್ನದ್ಧವಾಗಿರುವುದನ್ನು ಜಿಲ್ಲಾ ನೋಡಲ್ ಅಧಿಕಾರಿಗಳು, ಶಾಲಾ ಮೇಲುಸ್ತುವಾರಿ ಅಧಿಕಾರಿಗಳು ಹಾಗೂ ಶಾಲಾ ಮುಖ್ಯಸ್ಥರು ಖಾತ್ರಿಪಡಿಸಿಕೊಳ್ಳತಕ್ಕದು.

2026-27 ನೇ ಸಾಲಿನ 'ಕಲಿಕಾ ಬಲವರ್ಧನೆಗೆ ಸಂಬಂಧಿಸಿದ ವಿದ್ಯಾರ್ಥಿಗಳ ಚಟುವಟಿಕೆ 'ಪುಸ್ತಕ' ಈಗಾಗಲೇ ವಿದ್ಯಾರ್ಥಿಗಳ ಕೈಯಲ್ಲಿದ್ದು ಅದು ಚಟುವಟಿಕೆ ಆಧಾರಿತ ಹಾಗೂ ಕಲಿಕಾಫಲ ಆಧಾರಿತವಾಗಿದೆ ಅದನ್ನು ಸೇತುಬಂಧ ಕಾರ್ಯಕ್ರಮದಲ್ಲಿ ಸಂಪೂರ್ಣವಾಗಿ ಬಳಸಿಕೊಳ್ಳುವುದು ಹಾಗೂ ಶಿಕ್ಷಕರು ವಾರ್ಷಿಕ ಕ್ರಿಯಾಯೋಜನೆ ಮತ್ತು ಪಾಠಯೋಜನೆಗಳಲ್ಲಿ ಕಡ್ಡಾಯವಾಗಿ ವಿದ್ಯಾರ್ಥಿಗಳ ಚಟುವಟಿಕೆ ಪುಸ್ತಕ, ಶಿಕ್ಷಕರ ಚಟುವಟಿಕೆ ಕೋಶಗಳಲ್ಲಿರುವ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು ಜೊತೆಗೆ ಪ್ರತಿ ಮಾಹೆಯು ಕಡ್ಡಾಯವಾಗಿ ಪ್ರತಿ ಪಾಠಕ್ಕೆ ಕಿರುಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿ ದಾಖಲಿಸತಕ್ಕದ್ದು ಹಾಗೂ ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನದಲ್ಲಿ ಬಳಸಿಕೊಳ್ಳುವುದು ಹಾಗೂ ಪೋಷಕರ ಸಭೆಯಲ್ಲಿ ಮಕ್ಕಳ ಪ್ರಗತಿಯ ಬಗ್ಗೆ ಅರಿವು ಮೂಡಿಸಿ ಮಕ್ಕಳಿಗೆ ಪ್ರೋತ್ಸಾಹ ನೀಡಿ ಹಿಂದುಳಿದ ಮಕ್ಕಳಿಗೆ ಗುರಿ ತಲುಪುವವರೆಗೆ ಅಗತ್ಯ ಕ್ರಮವಹಿಸಿ ಮಕ್ಕಳ ಕಲಿಕಾ ಮಟ್ಟ ಉತ್ತಮಪಡಿಸುವುದು. ಅನುಪಾಲನಾ ಅಧಿಕಾರಿಗಳು (ಸಿ.ಆರ್.ಪಿ. ಬಿ.ಆರ್.ಪಿ, ಇ.ಸಿ.ಓ. ಬಿ.ಇ.ಓ. ಡಯಟ್ ಹಾಗೂ ಡಿ.ಡಿ.ಪಿ.ಐ ಕಛೇರಿಯ ಅಧಿಕಾರಿಗಳು) ಚಟುವಟಿಕೆ ಆಧಾರಿತ ಶಿಕ್ಷಣವನ್ನು ವಿದ್ಯಾರ್ಥಿಗಳು ಪಡೆಯುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಅನುಪಾಲನಾ ಅಧಿಕಾರಿಗಳು ಶಿಕ್ಷಕರ ಸಮಾಲೋಚನ ಸಭೆ ಹಾಗೂ ವಿಷಯಾಧಾರಿತ ಸಭೆಗಳಲ್ಲಿ ಕಲಿಕಾ ಬಲವರ್ಧನೆಯ ಪ್ರಗತಿಯನ್ನು ಕಡ್ಡಾಯವಾಗಿ ಪರಿಶೀಲಿಸುವುದು ಶಿಕ್ಷಕರು ಚಟುವಟಿಕೆ ಆಧಾರಿತ ಕಲಿಕೆಗೆ ಪ್ರೋತ್ಸಾಹಿಸುತ್ತ, ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರಹೊಮ್ಮಿಸುತ್ತ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಸರ್ವಪ್ರಯತ್ನ ಮಾಡುವುದು.

ಒಟ್ಟಾರೆಯಾಗಿ ಮೇಲ್ಕಂಡ ಅಂಶಗಳನ್ನು ಹಾಗೂ ಈ ಸಂಬಂಧ ಸರ್ಕಾರದಿಂದ ಮತ್ತುಇಲಾಖೆಯಿಂದ ಕಾಲ ಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ಸಮರ್ಪಕವಾಗಿ ಮತ್ತು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಸಕಾಲಿಕ ಕ್ರಮಗಳನ್ನು ವಹಿಸುವುದರ ಮೂಲಕ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಕಳೆದ ಸಾಲುಗಳಲ್ಲಿ ಇದ್ದ ವಿದ್ಯಾರ್ಥಿಗಳ ದಾಖಲಾತಿಯನ್ನು ಗಣನೀಯವಾಗಿ ಹೆಚ್ಚಿಸಲು ಹಾಗೂ ಸದರಿ ಅಂಕಿ ಅಂಶಗಳನ್ನು ಕಾಲ ಕಾಲಕ್ಕೆ, ಸ್ಯಾಟ್ಸ್ ತಂತ್ರಾಂಶದಲ್ಲಿ ಇಂಧೀಕರಿಸಲು ನಿಯಮಾನುಸಾರ ಅಗತ್ಯ ಕ್ರಮಗಳನ್ನು ವಹಿಸುವಂತೆ ಸಂಬಂಧಿಸಿದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು ಶಾಲಾ ಮೇಲುಸ್ತುವಾರಿ ಅಧಿಕಾರಿಗಳು, ಹಾಜರಾತಿ ಅಧಿಕಾರಿಗಳು ಹಾಗೂ ಶಾಲಾ ಮುಖ್ಯಸ್ಥರಿಗೆ ಈ ಮೂಲಕ ಕ್ರಿಯಾಶೀಲವಾಗಿ ಮತ್ತು ಸಕ್ರಿಯಾವಾಗಿ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ.

Digitally signed by
VIKAS KISHOR SURALKAR
Date: 25-05-2026
11:09:26

**ಆಯುಕ್ತರು,**
**ಶಾಲಾ ಶಿಕ್ಷಣ ಇಲಾಖೆ**

ಇವರಿಗೆ.

1 ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ

2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) & (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ ರವರಿಗೆ

3. ರಾಜ್ಯದ ಎಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ

4 . ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರಿಗೆ (ಆಯಾ ಉಪನಿರ್ದೇಶಕರು (ಆಡಳಿತ) ರವರ ಮೂಲಕ.

5 ರಾಜ್ಯದ ಎಲ್ಲಾ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಸಮಗ್ರ ಶಿಕ್ಷಣ ಕರ್ನಾಟಕ (ಆಯಾ ಉಪಯೋಜನಾ ಸಮನ್ವಯಾಧಿಕಾರಿಗಳ ಮೂಲಕ).

6 . ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಶಾಲಾ ಮೇಲುಸ್ತುವಾರಿ ಅಧಿಕಾರಿಗಳು, ಹಾಜರಾತಿ ಅಧಿಕಾರಿಗಳು ಹಾಗೂ ಶಾಲಾ ಮುಖ್ಯಸ್ಥರಿಗೆ(ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ)
7 ಈ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು(ಇ ಆಡಳಿತ) ಇವರಿಗೆ ಕಳುಹಿಸುತ್ತಾ, ಇಲಾಖಾ ಅಂತರ್ಜಾಲ ತಾಣದಲ್ಲಿ ಈ ಸುತ್ತೋಲೆಯನ್ನು ಅಳವಡಿಸಲು ತಿಳಿಸಿದೆ
8. ಈ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು (ಸ್ಟಾಟ್ಸ್) ಇವರಿಗೆ

ಪ್ರತಿಯನ್ನು ಮಾಹಿತಿಗಾಗಿ,

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ & ಸಾಕ್ಷರತಾ ಇಲಾಖೆ, 6ನೇ ಮಹಡಿ. ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2 ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
4 ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ
5 ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ
6. ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರ / ಸಹನಿರ್ದೇಶಕರ ವೃಂದದ ಎಲ್ಲಾ ಅಧಿಕಾರಿಗಳಿಗೆ
7 ಉಪನಿರ್ದೇಶಕರು(ಯೋಜನೆ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು
8 ಕಛೇರಿ ಪ್ರತಿ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| **ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಇಲಾಖೆ** | | | | | | | | | | | | | | |
| **2026-27ನೇ ಸಾಲಿನ ಮಿಂಚಿನ ಸಂಚಾರ/ಶಾಲಾ ಸಂದರ್ಶನ ಸಪ್ತಾಹ ಕಾರ್ಯಕ್ರಮದ ನಮೂನೆ** | | | | | | | | | | | | | | |
| **ಜಿಲ್ಲೆಯ ಹೆಸರು** | | | **ತಾಲ್ಲೂಕು** | | | | | | | **ಕ್ಲಸ್ಟರ್** | | | | |
| * | ಸಂದರ್ಶನಾಧಿಕಾರಿಗಳು/ಸಿಬ್ಬಂದಿಗಳ ಹೆಸರು ಮತ್ತು ವಿಳಾಸ | | | | | | | | | | | | | |
| * | ಸಂದರ್ಶಿಸಿದ ಶಾಲೆ ಹೆಸರು ಮತ್ತು ವಿಳಾಸ | | | | | | | | | | | | | |
| * | ಶಾಲಾ ಸಂದರ್ಶನ ದಿನಾಂಕ ಮತ್ತು ಸಮಯ | | | | | | | | | | | | | |
| * | ಶಾಲಾ ಡೈಸ್ ಸಂಖ್ಯೆ | | | | | | | | | | | | | |
| * | ಮಾಧ್ಯಮ | | | | | | | | | | | | | |
| * | ಮುಖ್ಯ ಶಿಕ್ಷಕರ ಹೆಸರು & ಮೊಬೈಲ್ ನಂ | | | | | | | | | | | | | |
| A | ಶಾಲಾ ಆಡಳಿತಾತ್ಮಕ ಚಟುವಟಿಕೆಗಳ ನಿರ್ವಹಣೆಯ ಪ್ರಗತಿ ಪರಿಶೀಲನೆ | | | | | | | | | | | | | |
| 1 | ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ ವಿವರ | | | | | | | | | | | | | |
| | ತರಗತಿ | | 1 | 2 | 3 | 4 | 5 | 6 | 7 | 8 | 9 | 10 | ಒಟ್ಟು | |
| a | ದಾಖಲಾತಿ | | | | | | | | | | | | | |
| b | ಹಾಜರಾತಿ | | | | | | | | | | | | | |
| c | ಗೈರು ಹಾಜರಿ | | | | | | | | | | | | | |
| d | ದೀರ್ಘ ಗೈರು ಹಾಜರಿ | | | | | | | | | | | | | |
| e | ಕಳೆದ ಸಾಲಿಗೆ ಹೋಲಿಸಿದಾಗ ದಾಖಲಾತಿ ಪ್ರಗತಿ | ಪ್ರಸ್ತುತ | | | | | | | | | | | | |
| | | ಹಿಂದಿನ ವರ್ಷ | | | | | | | | | | | | |
| | ದಾಖಲಾತಿಯ ಶೇಕಡಾ ಪ್ರಗತಿ ನಮೂದಿಸುವುದು. ತದನಂತರ ಸಾಧಾರಣಾ/ಉತ್ತಮ ಎಂದು ನಮೂದಿಸುವುದು | ಸಾಧಾರಣ/ಉತ್ತಮ | | | | | | | | | | | | |

| | | | | | |
|---|---|---|---|---|---|
| 2 | ಹುದ್ದೆಗಳ ವಿವರ | ಒಟ್ಟು ಮಂಜೂರಾದ ಹುದ್ದೆಗಳು | ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು | ಅತಿಥಿ ಶಿಕ್ಷಕರ ನೇಮಕಾತಿ |

| | | | | | | | | |
|---|---|---|---|---|---|---|---|---|
| | | | | | | | | |
| 3 | 2024-25ನೇ ಸಾಲಿನ ದಾಖಲಾತಿ ಆಂದೋಲನದ ಪ್ರಗತಿ | | | | | | | ಸಾಧರಣ/ಉತ್ತಮ |
| 4 | ಶಿಕ್ಷಕರ /ತರಗತಿ ವೇಳಾಪಟ್ಟಿ ಹಾಗೂ ಶಾಲಾ ಶೈಕ್ಷಣಿಕ ಕ್ರಿಯಾ ಯೋಜನೆ ತಯಾರಿಕೆ ಮತ್ತು ಅನುಪಾಲನೆ | | | | | | | ಸಾಧರಣ/ಉತ್ತಮ |
| 5 | ಎಸ್ ಡಿ ಎಂ ಸಿ/ಪೋಷಕರ /ತಾಯಂದಿರ ಸಭೆ ನಿರ್ವಹಣೆ ಕುರಿತು | | | | | | | |
| 6 | ಶಾಲಾ ಪರಿಸರ ಕುರಿತು ಅಭಿಪ್ರಾಯ | | | | | | | ಸಾಧರಣ/ಉತ್ತಮ |
| 7 | 2024-25ನೇ ಸಾಲಿನ ಪ್ರೋತ್ಸಾಹದಾಯಕ ಯೋಜನೆಗಳ ಅನುಷ್ಠಾನದ ಪ್ರಗತಿ ವರದಿ(ಭೇಟಿ ನೀಡಿದ ದಿನಾಂಕದವರೆಗೆ) | ಸಮವಸ್ತ್ರ | ಪಠ್ಯ ಪುಸ್ತಕ | ಶೂ ಮತ್ತು ಸಾಕ್ಸ್ | | | | ಷರಾ |
| | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | |
| | | | | | | | | |
| 8 | ಅಕ್ಷರ ದಾಸೋಹ ಕಾರ್ಯಕ್ರಮ | ದಾಸ್ತಾನು ಕೊಠಡಿ ಸ್ವಚ್ಛತೆ | ಅಡುಗೆ ಕೋಣೆ ಸ್ವಚ್ಛತೆ | | | | | ಸಾಧರಣ/ಉತ್ತಮ |
| a | ಶಾಲಾ ಆಸ್ತಿ ನಿರ್ವಹಣೆ ಕುರಿತು | | | | | | | |
| | ಶೈಕ್ಷಣಿಕ ಅಭಿವೃದ್ದಿ ಚಟುವಟಿಕೆಗಳು | | | | | | | |
| b | ಶೈಕ್ಷಣಿಕ ಅಭಿವೃದ್ದಿ ಚಟುವಟಿಕೆಗಳು | | | | | | | |

| | | | | | | | | | | |
|---|---|---|---|---|---|---|---|---|---|---|
| **9** | ಶೈಕ್ಷಣಿಕ ಚಟುವಟಿಕೆಗಳ ತಗರಗತಿ ಪರಿಶೀಲನೆ (ತರಗತಿವಾರು ಅವಲೋಕಿಸಿ ದಾಖಲಿಸುವುದು) ಬೋಧನಾ -ಕಲಿಕಾ ಚಟುವಟಿಕೆಗಳ ನಿರ್ವಹಣೆ ಹಾಗೂ ಮಕ್ಕಳ ಕಲಿಕಾ ಪ್ರಗತಿ ಕುರಿತು - ಸಾಧಾರಣ/ ಉತ್ತಮ ದಾಖಲಿಸುವುದು. | ನಲಿ-ಕಲಿ | 4ನೇ ತರಗತಿ | 5ನೇ ತರಗತಿ | 6ನೇ ತರಗತಿ | 7ನೇ ತರಗತಿ | 8ನೇ ತರಗತಿ | 9ನೇ ತರಗತಿ | 10ನೇ ತರಗತಿ | ಷರಾ ಸಾಧಾರಣ/ಉತ್ತಮ |
| | | | | | | | | | | |
| 10 | ಪೀಠೋಪಕರಣಗಳು(ತರಗತಿವಾರು) ಲಭ್ಯತೆ ಕುರಿತು ದಾಖಲಿಸುವುದು) | | | | | | | | | |
| | **ಶೈಕ್ಷಣಿಕ ಪೂರಕ ಸಾಮಾಗ್ರಿಗಳ ಬಳಕೆ ಕುರಿತು** | | | | | | | | | |
| 11 | ನಲಿ-ಕಲಿ ಸಾಮಾಗ್ರಿಗಳ ಜೋಡಣೆ ಮತ್ತು ತರಗತಿ ನಿರ್ವಹಣೆ | | | | | | | | | ಸಾಧಾರಣ/ಉತ್ತಮ |

| | | | | | |
|---|---|---|---|---|---|
| 12 | ಗ್ರಂಥಾಲಯ ನಿರ್ವಹಣೆ ಕುರಿತು | | | | ಸಾಧಾರಣ/ಉತ್ತಮ |
| 13 | ಪ್ರಯೋಗಾಲಯ ನಿರ್ವಹಣೆ ಕುರಿತು | | | | ಸಾಧಾರಣ/ಉತ್ತಮ |
| 14 | ವಾಚನಾಲಯ ನಿರ್ವಹಣೆ ಕುರಿತು | | | | ಸಾಧಾರಣ/ಉತ್ತಮ |
| 15 | ಇ - ಕಲಿಕಾ ಕೇಂದ್ರ ನಿರ್ವಹಣೆ ಕುರಿತು | | | | ಸಾಧಾರಣ/ಉತ್ತಮ |
| 16 | ಶೈಕ್ಷಣಿಕ ಬಲವರ್ಧನೆಗಾಗಿ ರೂಪಿಸಿದ ಶಾಲಾ ವಿಶೇಷ ಕಾರ್ಯಕ್ರಮಗಳು (SCHOOL INNOVATIVE'S PROGRAMMES) | | | | ಸಾಧಾರಣ/ಉತ್ತಮ |
| 17 | ಶಾಲಾ ಶೈಕ್ಷಣಿಕ ಸಾಧನೆಗಳು | | | | ಸಾಧಾರಣ/ಉತ್ತಮ |
| 18 | ಶೈಕ್ಷಣಿಕ ಗುಣಮಟ್ಟ (ಫಲಿತಾಂಶ) ಸುಧಾರಣೆಗೆ ಕೈಗೊಂಡ ಕಾರ್ಯಕ್ರಮಗಳು | | | | ಸಾಧಾರಣ/ಉತ್ತಮ |
| C | **ಶಾಲಾಭಿವೃದ್ದಿ ಕಾರ್ಯಕ್ರಮಗಳು** | | | | |
| | ಶಾಲಾ ಮೂಲ ಭೂತ ಸೌಕರ್ಯಗಳ ಲಭ್ಯತೆ ವಿವರ | | | | |
| 19 | ಶೌಚಾಲಯ ಲಭ್ಯತೆ ವಿವರ | ಗಂಡು ಮಕ್ಕಳ ಶೌಚಾಲಯಗಳು | ಹೆಣ್ಣು ಮಕ್ಕಳ ಶೌಚಶಲಯಗಳು | ಸ್ವಚ್ಛತೆ | ಸಾಧಾರಣ/ಉತ್ತಮ |

| | | | | | | | |
|---|---|---|---|---|---|---|---|
| 20 | ಕುಡಿಯುವ ನೀರಿನ ಲಭ್ಯತೆ | | | | | | ಸಾಧಾರಣ/ಉತ್ತಮ |
| 21 | ಆಟದ ಮೈದಾನ ಲಭ್ಯತೆ | | | | | | ಸಾಧಾರಣ/ಉತ್ತಮ |
| 22 | ಶಾಲಾ ಕೈತೋಟ/ ಸಸ್ಯ ಶಾಮಲ | ಅನುಷ್ಟಾನ | | | | ಅಭಿಪ್ರಾಯ | ಸಾಧಾರಣ/ಉತ್ತಮ |
| 23 | ಶಾಲಾ ಕಟ್ಟಡ ನಿರ್ವಹಣೆ | | | | | | ಸಾಧಾರಣ/ಉತ್ತಮ |
| 24 | ಶಾಲಾ ಕಟ್ಟಡ ಕಾಮಗಾರಿಗಳ ನಿರ್ವಾಹಣೆ | | | | | | ಸಾಧಾರಣ/ಉತ್ತಮ |
| 25 | ನನ್ನ ಶಾಲೆ ನಮ್ಮ ಜವಾಬ್ದಾರಿ ಕಾರ್ಯಕ್ರಮ ಅನುಷ್ಠಾನ ಕುರಿತು | | | | | | ಸಾಧಾರಣ/ಉತ್ತಮ |
| | ಪ್ರಗತಿ ದಾಖಲೆ | ಸಾಧಾರಣ | | ಒಟ್ಟು ಉತ್ತಮ | | ಷರಾ | |
| | | | 25 | | 25 | 10 ಕ್ಕಿಂತ ಹೆಚ್ಚು ಸಾಧಾರಣವಿದ್ದಲ್ಲಿ ಸದರಿ ಶಾಲೆ ಸಾಧಾ ಎಂದು ಪರಿಗಣಿಸುವುದು | |

ಒಟ್ಟಾರೆ ಶಾಲೆ ಕುರಿತು
ಅಭಿಪ್ರಾಯ:-

ಮುಖ್ಯ ಶಿಕ್ಷಕರ ಹೆಸರು ಸಹಿ ಮತ್ತು ಮೊಹರು ಭೇಟಿ ನೀಡಿದ ಅಧಿಕಾರಿಯ ಹೆಸರು ಸಹಿ ಮತ್ತು ಮೊಹರು

ಷರಾ

1. ಮೇಲ್ಕಂಡಂತೆ ಒಟ್ಟು 25 ಅಂಶಗಳಿಗೆ ಪರಿಶೀಲನೆ ಮಾಡಿ ಹೆಚ್ಚು ಸುಧಾರಣೆ/ಪ್ರಗತಿ ಸಾಧಿಸಿದ ಶಾಲೆಗಳೆಂದು ಶ್ರೇಣೀಕರಿಸಿ, ಅಂದರೆ 1( ಅಂಶಗಳಿಗಿಂತ ಹೆಚ್ಚು ಸಾಧಾರಣಾ ಪ್ರಗತಿ ಸಾಧಿಸಿದ ಶಾಲೆಗಳನ್ನು  ಸುಧಾರಣೆಗೆ ಕ್ರಮವಹಿಸಬೇಕಾದ ಶಾಲೆಗಳೆಂದು ಪರಿಗಣಿಸಿ ಮುಂದಿನ ನಿರಂತರ ಅನುಪಾಲನೆ ಮಾಡುವುದು

2. ಸದರಿ ನಮೂನೆಯನ್ನಾಧರಿಸಿ ಮಾಹಿತಿಯನ್ನು ಗೂಗಲ್ ಶೀಟ್ ನಲ್ಲಿ ಇಂದೀಕರಿಸುವುದು